ಭಜರಂಗಬಲಿ', ಕೃಷ್ಣಮೂರ್ತಿ ಹನೂರರ 'ಅಜ್ಞಾತನೊಬ್ಬನ ಆತ್ಮಚರಿತ್ರೆ'. ಇವುಗಳಲ್ಲಿ ವಿವೇಕರ ಕಾದಂಬರಿ ಒಂದೇ ಕಾಲಕ್ಕೆ ಮೂರು ಪ್ರತಿಷ್ಠಿತ ಇಂಗ್ಲಿಷ್ ಪ್ರಕಾಶಕರಿಂದ ಪ್ರಕಟವಾಗಿ, ಈಗ ಇತರ ಯೂರೋಪಿಯನ್ ಭಾಷೆಗಳಿಗೂ ಅನುವಾದವಾಗುತ್ತಿದ್ದರೆ, ವಸುಧೇಂದ್ರ ಅವರ ಕಾದಂಬರಿ ಪ್ರಸಿದ್ಧ ಇಂಗ್ಲಿಷ್ ಪ್ರಕಾಶಕರಿಂದ ಪ್ರಕಟಗೊಂಡು, ಒಂದು ವರ್ಷದಲ್ಲಿಯೇ ಎರಡು ಮುದ್ರಣಗಳನ್ನು ಕಂಡಿದೆ; ಜಯಂತ ಕಾಯ್ಕಿಣಿ ಅವರ ಮುಂಬೈ ಕತೆಗಳ ಇಂಗ್ಲಿಷ್ ಅನುವಾದದ ಸಂಕಲನ 'ನೋ ಪ್ರಸೆಂಟ್ಸ್ ಪ್ಲೀಸ್' ಅಂತರರಾಷ್ಟ್ರೀಯ ಡಿಎಸ್‌ಸಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದೆ. ಕಾವ್ಯ: ಎಚ್.ಎಸ್. ವೆಂಕಟೇಶ ಮೂರ್ತಿಯವರ 'ಉತ್ತರಾಯಣ', ಲತಾ ರಾಜಶೇಖರ ಅವರ 'ಏಸು ಮಹಾಕಾವ್ಯ'. ಸಣ್ಣಕಥೆ: ವೈದೇಹಿಯವರ 'ಕ್ರೌಂಚಪಕ್ಷಿಗಳು', ವಸುಧೇಂದ್ರ ಅವರ 'ಮೋಹನಸ್ವಾಮಿ'... ಇವುಗಳಲ್ಲಿ ಯಾವುದು ಬೇಕಾದರೂ ಅಥವಾ ಎಲ್ಲವೂ 'ಕ್ಲಾಸಿಕ್' ಎಂದು ಮೂರ್ನಾಲ್ಕು ದಶಕಗಳ ನಂತರ ಗುರುತಿಸಲ್ಪಡಬಹುದು ಅಥವಾ ಮರೆಯಲ್ಪಡಬಹುದು. (ಮೇಲೆ ಕೊಟ್ಟ ಕೃತಿಗಳ ಪಟ್ಟಿಗೆ ಇನ್ನೂ ಹತ್ತಿಪ್ಪತ್ತು ಸೇರಿಸಬಹುದು).

ಹಾಗಾದರೆ, ಇಂದು ಕನ್ನಡ ಸಾಹಿತ್ಯ ಎದುರಿಸುತ್ತಿರುವ ಸಮಸ್ಯೆಗಳು ಏನೂ ಇಲ್ಲವೆ? —ಸಾಕಷ್ಟು ಇವೆ. ಆದರೆ, ಕಾರಣಗಳು ಸಾಹಿತ್ಯೇತರ.

ಆದ್ಯತೆಯ ಮೇರೆ ಹೇಳಬೇಕಾದರೆ, ಮೊಟ್ಟಮೊದಲು ಆಗಬೇಕಾದುದು ಖಾಸಗೀ ಪುಸ್ತಕಾಲಯಗಳ ಜಾಲವನ್ನು ಕರ್ನಾಟಕದಾದ್ಯಂತ ವಿಸ್ತರಿಸುವುದು. ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಈ ಭಾಗಗಳಲ್ಲಿ ಪುಸ್ತಕ ಮಳಿಗೆಗಳು ಇರುವುದು ಬೆರಳೆಣಿಕೆಯಷ್ಟು. ಓದುಗರು ಸಾಕಷ್ಟು ಇದ್ದಾರೆ, ಗಮನೀಯ ಕೃತಿಗಳೂ ಸಾಕಷ್ಟಿವೆ; ಆದರೆ, ಹೆಚ್ಚಿನ ಜಿಲ್ಲೆ–ತಾಲ್ಲೂಕುಗಳಲ್ಲಿ ಸುಲಭವಾಗಿ ಪುಸ್ತಕಗಳು ಸಿಗುವುದಿಲ್ಲ. ಹತ್ತಿರದ ನಗರಕ್ಕೆ ಹೋಗಿ, ಅಲ್ಲಿ ಪುಸ್ತಕಾಲಯಗಳು ಇದ್ದರೆ ಪುಸ್ತಕಗಳನ್ನು ಕೊಂಡು ಓದುವುದು ಹೆಚ್ಚಿನ ಓದುಗರಿಗೆ – ಅದೂ ಗೃಹಿಣಿಯರಿಗೆ ಸಾಧ್ಯವಾಗುವುದಿಲ್ಲ. ಸರಕಾರದ ಸಗಟು ಖರೀದಿಯೇನೋ ಇದೆ; ಆದರೆ, ಆಯ್ಕೆ ಮಾಡಿದ ಪುಸ್ತಕಗಳು ಎಲ್ಲಿ ಹೋಗುತ್ತವೆಯೋ ಗೊತ್ತಿಲ್ಲ. (ಈ ಸಗಟು ಖರೀದಿ ಯೋಜನೆಯ ಬಗ್ಗೆಯೇ ಸ್ವತಂತ್ರ ಲೇಖನವನ್ನು ಬರೆಯಬಹುದು). ಎರಡನೆಯದಾಗಿ, ಬೆಂಗಳೂರಿನಲ್ಲಿರುವ ನನ್ನಂತಹವರಿಗೇ ಯಾವ ಹೊಸ ಪುಸ್ತಕಗಳು ಬಂದಿವೆ, ಅವು ಎಲ್ಲಿ ಸಿಗುತ್ತವೆ ಗೊತ್ತಾಗುವುದಿಲ್ಲ. ಇಂದು (ಒಂದೆರಡು ಅಪವಾದಗಳನ್ನು ಬಿಟ್ಟರೆ) ಯಾವ ದಿನ–ವಾರ–ಮಾಸ ಪತ್ರಿಕೆಯೂ ಪುಸ್ತಕ ವಿಮರ್ಶೆಗೆ, ಕನಿಷ್ಠ ಪಕ್ಷ ಸಾದರಸ್ವೀಕಾರಕ್ಕೆ, ಸ್ಥಳ ಕೊಡುವುದಿಲ್ಲ. ಸಾಹಿತ್ಯಕ್ಕೂ ಸಮಾಜಕ್ಕೂ ಘನಿಷ್ಠ ಸಂಬಂಧವಿದೆ ಎಂದು ನಂಬಿದರೆ, ಸಾಹಿತ್ಯವನ್ನು ಬೆಳೆಸುವುದು ಹಾಗೂ ಪ್ರೋತ್ಸಾಹಿಸುವುದು ಒಟ್ಟಾರೆ ಸಮಾಜದ –ಎಂದರೆ ಪೋಷಕರ, ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ, ಖಾಸಗಿ ಸಂಘ–ಸಂಸ್ಥೆಗಳ, ಹಾಗೂ ಸರಕಾರದ ಜವಾಬ್ದಾರಿ. ಇಂದಿನ ಕನ್ನಡ ಸಾಹಿತ್ಯದ ಗತಿ–ಸ್ಥಿತಿಗಳನ್ನು ಕುರಿತ ನನ್ನ ಈ ಗ್ರಹಿಕೆ ಸರಿಯಾಗಿದೆಯೋ ಇಲ್ಲವೋ ಎಂದು ಓದುಗರು ಹೇಳಬೇಕು.

## ಸಿ.ಎನ್. ರಾಮಚಂದ್ರನ್

ಕನ್ನಡದ ಪ್ರಸಿದ್ಧ ವಿಮರ್ಶಕ, ಅನುವಾದಕ, ಕಥೆಗಾರ ಸಿಎನ್‌ಆರ್ ಸುಮಾರು 30 ಕೃತಿಗಳನ್ನು ರಚಿಸಿದ್ದಾರೆ. 'ಶಿಲ್ಪ ವಿನ್ಯಾಸ' ಅವರ ಮೊದಲ ವಿಮರ್ಶಾ ಸಂಕಲನ. 'ಶೋಧ' ಅವರ ಕಾದಂಬರಿಯಾದರೆ, 'ಕಸಾಂದ್ರ' ಅವರ ಕಥಾಸಂಗ್ರಹ. 'ನೆರಳುಗಳ ಬೆನ್ನು ಹತ್ತಿ' ಅವರ ಆತ್ಮಕಥನ. ಕೆ.ಎಸ್. ನರಸಿಂಹಸ್ವಾಮಿ ಅವರ ಸಮಗ್ರ ಸಾಹಿತ್ಯವನ್ನು ಸಂಪಾದಿಸಿದ್ದಾರೆ. ಸಿಎನ್‌ಆರ್ ಅಧ್ಯಾಪಕ ವೃತ್ತಿಯಿಂದ ನಿವೃತ್ತರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.